ಬ್ಯಾಂಕಿಂಗ್ ವೃತ್ತಿಯ ಏಕತಾನತೆಯನ್ನು ಮುರಿಯಲು ಸಾಹಿತ್ಯವನ್ನು ಆಶ್ರಯಿಸಿದ ಟಿ.ಎಂ. ರಮೇಶ್ ಅವರು ಕಥೆ ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. 'ಇಂಡಾ', 'ದೃಷ್ಟಿ ಹರಿದಷ್ಟೆ ದೂರ' ಸೇರಿದಂತೆ ಐದು ಕಥಾ ಸಂಕಲನ, ಎರಡು ಕಿರುಕಾದಂಬರಿ, ಒಂದು ಕವನ ಸಂಕಲನ ಪ್ರಕಟವಾಗಿವೆ. ತಾಳಮದ್ದಲೆ ಅರ್ಥದಾರಿಯಾಗಿ ಗುರುತಿಸಿಕೊಂಡಿರುವ ಅವರು ಉತ್ತರಕನ್ನಡದ ಸಿದ್ದಾಪುರದಲ್ಲಿ ನೆಲೆಸಿದ್ದಾರೆ.

ಯಾರೂ ಇಲ್ಲ. ಬದುಕಿನಲ್ಲಿ ನಿರಾಶಾವಾದಿಯಾಗಿ ದಿನವನ್ನೆಣಿಸುತ್ತಿರುವವಳು. ಅದೇ ಕಟ್ಟಡದ ಇನ್ನೊಂದು ಭಾಗದಲ್ಲಿ ಒಬ್ಬ ಅದೃಷ್ಟಹೀನ, ದರಿದ್ರ ಮುದುಕ ಕಲಾವಿದನೊಬ್ಬನಿದ್ದ. ಆತ ಆಗಾಗ ಬಂದು ಆ ಹೆಣ್ಣಿಗೆ ಒಂದೆರಡು ಸಮಾಧಾನದ ಮಾತು ಹೇಳಿ ಹೋಗುತ್ತಿರುತ್ತಾನೆ. ಆ ಮುದುಕನಿಗೂ ಸರಿಯಾದ ಕೆಲಸವಿಲ್ಲ, ವರಮಾನವಿಲ್ಲ. ಆದರೆ, ಆತ ಯಾವಾಗಲೂ ಆಶಾವಾದಿ. ತೀವ್ರ ನಿರಾಶಾವಾದಿಯಾಗಿ ದಿನವನ್ನೆಣಿಸುತ್ತಿರುವ ದುರದೃಷ್ಟವಂತ ಹೆಣ್ಣು ಸದಾಕಾಲ ಕಿಟಕಿಯಿಂದ ಹೊರಗೆ ಕಾಣುವ ಮರಗಳು ಉದುರಿಸುವ ಎಲೆಗಳನ್ನ ನೋಡುತ್ತ ತಾನೂ ಒಂದು ದಿನ ಹಾಗೆಯೇ ತನ್ನೆಲ್ಲ ಸಂಬಂಧಗಳೆಂಬ ಎಲೆಗಳು ಉದುರಿ ಸಾಯಬಹುದೆಂದು ಅಂದುಕೊಳ್ಳುತ್ತಿರುತ್ತಾಳೆ. ಎದುರಿಗಿನ ಗೋಡೆಗೆ ಅಂಟಿಕೊಂಡಂತಿರುವ ಕೊಂಬೆಯಲ್ಲಿ ಇರುವ ಒಂದು ಎಲೆಯನ್ನುಳಿದು ಉಳಿದೆಲ್ಲ ಎಲೆಗಳು ಉದುರಿ ಬೀಳುತ್ತವೆ. ಗೋಡೆಗೆ ಅಂಟಿಕೊಂಡಂತಿರುವ ಆ ಒಂದು ಎಲೆ ಬೀಳುತ್ತಲೇ ತನ್ನ ಪ್ರಾಣವು ಹೋಗಬಹುದೆಂದು ಆ ಹೆಣ್ಣು ಹಗಲಿರುಳು ನಿರೀಕ್ಷಿಸುತ್ತಿರುತ್ತಾಳೆ. ಒಂದು ರಾತ್ರಿ ಭಯಂಕರ ಬಿರುಗಾಳಿ. ಬೆಳಗಾಗುವಾಗ ಆ ಎಲೆ ಖಂಡಿತ ಉದುರಿಹೋಗಿರುತ್ತದೆ, ತನ್ನ ಪ್ರಾಣ ಹೋಗಿರುತ್ತದೆ ಎಂದು ಆ ಹೆಣ್ಣು ಅಂದುಕೊಳ್ಳುತ್ತಾಳೆ. ಆದರೆ, ಎಲೆ ಉದುರುವುದೇ ಇಲ್ಲ, ಮರುದಿನವೂ ಅಲ್ಲಿಯೇ ಇರುತ್ತದೆ. ಹರ್ಷಚಿತ್ತಳಾದ ಆ ಹೆಣ್ಣಿಗೆ ಕ್ರಮೇಣ ಗುಣವಾಗುತ್ತದೆ. ಕಡೆಗೂ ಆ ರೆಂಬೆಯಲ್ಲಿನ ಎಲೆ ಬೀಳುವುದೇ ಇಲ್ಲ. ಕಾರಣ, ಅದು ಗೋಡೆಯ ಮೇಲೆ ಸಹಜವಾಗಿ ಕಾಣುವಂತೆ ಚಿತ್ರಿಸಿದ್ದ ಒಂದು ಎಲೆ. ಆ ವೃದ್ಧ ದರಿದ್ರ ಕಲಾವಿದ ಆ ಹೆಣ್ಣಿಗಾಗಿ ಬಿಡಿಸಿದ್ದ ಚಿತ್ರದ ಎಲೆ. ಬಿರುಗಾಳಿಯಲ್ಲಿಯೂ, ಚಳಿಯಲ್ಲಿಯೂ, ತೆರೆದ ಬಯಲಿನಲ್ಲಿಯೂ ನಿಂತು, ಅವಳಿಗಾಗಿ ಎಲೆಯನ್ನು ಬರೆದ ಕಲಾವಿದ ತಾನು ರೋಗದಿಂದ ಬಳಲಿ ಸತ್ತುಹೋಗುತ್ತಾನೆ. ಸ್ಥಿರತೆ ಸಾವನ್ನು ತಡೆಯುತ್ತದೆ. ಹಾಗೇ ಗಡಿಯಾರ ಅನೂಚಾನವಾಗಿ ನಡೆಯುವಂತೆ ನೋಡಿಕೊಂಡರೆ ಸಾವನ್ನು ಮುಂದೆ ಹಾಕಬಹುದು ಎನ್ನುವ ಬಗೆಯಲ್ಲಿ ಬಹಳ ಜನ ಬರೆದಿರುವುದಿದೆ. ಎಮಿಲಿ ಡಿಕನ್ಸನ್ ಅವರ **A clock stopped** ಎನ್ನುವ ಕವಿತೆಯಿರಲಿ, **time heals, steals, flies** ಎನ್ನುವ ನಾಣ್ಣುಡಿಯಾಗಲಿ ಹೇಳುವುದು ಇದನ್ನೇ.

**Steals, flies** ಎಂದಾಗ ನನ್ನ ಶಾಲೆಯ ದಿನಗಳು ನೆನಪಾಗುತ್ತಿವೆ. ನಮ್ಮ ಏಕೋಪಾಧ್ಯಾಯ ಶಾಲೆಯಲ್ಲಿ ಒಂದು ಗಡಿಯಾರವಿತ್ತು. ಬಹಳ ಪ್ರಾಮಾಣಿಕ ಗಡಿಯಾರ – ಆ ಕಾಲದ ಜನಗಳಂತೆ. ಸರಿಯಾದ ಸಮಯ ತೋರಿಸುತ್ತಿತ್ತು. ಅದೇ ನಮಗೆ ಒಮ್ಮೊಮ್ಮೆ ತೊಂದರೆ ಕೊಡುತ್ತಿದ್ದುದು. ನಾವು ಸಂಜೆ ಕಬಡ್ಡಿ ಮ್ಯಾಚೋ, ಬೆಟ್ಟದಲ್ಲಿ ಮುಳ್ಳಣ್ಣು ಹುಡುಕುವ ಪ್ರೋಗ್ರಾಮೋ ಇಟ್ಟುಕೊಂಡಾಗಲೂ, 'ಯಾರೇ ಕೂಗಾಡಲಿ...' ಎನ್ನುವಂತೆ ತನ್ನ ಪಾಡಿಗೆ ನಿಷ್ಠೆಯಿಂದ ದುಡಿಯುತ್ತ ಬೇಗ ಬೇಗ ಓಡದಿರುವ– ಮಕ್ಕಳ ಬಗ್ಗೆ ಕನಿಕರವಿರದ– ಕೆಟ್ಟ ಗಡಿಯಾರ. ನಮ್ಮ ಏಕೋಪಾಧ್ಯಾಯರು ಬೀಡಿ ಸೇದಲೆಂದು ಶಾಲೆ ಹಿಂದೆ ಹೋದಾಗ ಮೆತ್ತಗೆ ಗಡಿಯಾರದ ಮುಳ್ಳನ್ನ ಸ್ವಲ್ಪ ಮುಂದೆ ಜರುಗಿಸುವ ಉಪಾಯವನ್ನು ನಮ್ಮ ಗೆಳೆಯ ಶೀನ ಹೇಳಿಕೊಟ್ಟಿದ್ದ. ಮರುದಿನ ಮತ್ತೆ ಮೊದಲು ಬಂದವರು ಗಡಿಯಾರವನ್ನು ಬೆಳಗ್ಗೆಯೆ ಸರಿ ಇಟ್ಟುಬಿಡುವುದು. ಒಂದಷ್ಟು ಕಾಲ ಈ ಉಪಾಯ ಫಲಿಸಿತ್ತು. ಒಂದು ದಿವಸ ಹೀಗೇ ಒಂದು ಗಂಟೆ ಮುಂಚೆ ಶಾಲೆ ಮುಗಿಸಿದ ಮಾಸ್ತರರು,

